# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

**ದಿನಾಂಕಃ 02.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ.ಎನ್ ಎಸ್ ರವರಿಂದ

ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ನೀವೇನು ಹೇಳಿ ಬರೆಸಿಲ್ಲ ಎಂದರೆ ಸಾಕ್ಷಿಯು ಸಹಿ ಹಾಕು ಎಂದು ಹೇಳಿದ್ದರು ಸಹಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ವಾದಿಯು ನಿಮ್ಮ ಮೊದಲನೇ ಹೆಂಡತಿ ಪುಷ್ಪಲತಾ ರವರ ಮಗಳು ಎಂದರೆ ಸರಿ. 3 ನೇ ಪ್ರತಿವಾದಿಯು ನಿಮ್ಮ ಮೊದಲನೇ ಹೆಂಡತಿಯ ಮಗ ಎಂದರೆ ಸರಿ. 4 ಮತ್ತು 5 ನೇ ಪ್ರತಿವಾದಿಗಳು ನಿಮ್ಮ 2 ನೇ ಹೆಂಡತಿ ಪದ್ಮಾ ರವರ ಮಕ್ಕಳು ಎಂದರೆ ಸರಿ. ನಿಮ್ಮ ಹೆಂಡತಿಯು ಜೀವಂತ ಇದ್ದಾಗಲೇ ನೀವು 2 ನೇ ಮದುವೆಯಾಗಿದ್ದೀರಿ ಎಂದರೆ ಸರಿ ಸಾಕ್ಷಿ ಮುಂದುವರೆದು ನನ್ನ ಮೊದಲನೇ ಹೆಂಡತಿ ಓಡಾಡುತ್ತಿರಲಿಲ್ಲ, ಪಾರ್ಶ್ವವಾಯು ಆಗಿತ್ತು ಎಂದು ನುಡಿಯುತ್ತಾರೆ. ನಿಮ್ಮ ಮೊದಲನೇ ಹೆಂಡತಿ ಆರೋಗ್ಯದಿಂದ ಇದ್ದರೂ ಕೂಡ ನೀವು ಪ್ರೀತಿಸಿ 2 ನೇ ಮದುವೆಯಾಗಿದ್ದೀರಿ ಎಂದರೆ ಸಾಕ್ಷಿಯು ಮೊದಲನೇ ಹೆಂಡತಿಗೆ ಏದ್ದೇಳಲು ಆಗುವುದಿಲ್ಲ ಮಕ್ಕಳನ್ನು ಸಾಕಲು ಆಗುವುದಿಲ್ಲ ಹಾಗಾಗಿ ಮದುವೆಯಾಗು ಎಂದು ನನ್ನ ಮೊದಲನೆ ಹೆಂಡತಿ ಹೇಳಿದ್ದಕ್ಕೆ 2 ನೇ ಮದುವೆಯಾಗಿದ್ದೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

2. ದಾವಾ ಅನುಸೂಚಿ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ – ಗಂಗಮ್ಮ ಮತ್ತು ಚಿಕ್ಕಣ್ಣ ಎಂದರೆ ಸರಿ. ಪಶ್ಚಿಮಕ್ಕೆ – ರಸ್ತೆ ಎಂದರೆ ಸರಿ, ಉತ್ತರಕ್ಕೆ – ರಸ್ತೆ ಎಂದರೆ ಸಾಕ್ಷಿಯು

ಬೇರೆಯವರ ಜಮೀನು ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ರಸ್ತೆ ಬಿಟ್ಟುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ – ಚಿಕ್ಕಣ್ಣ ರವರ ಜಮೀನು ಎಂದರೆ ಶಿವಮೂರ್ತಿ ರವರ ಜಮೀನು ಎಂದು ನುಡಿಯುತ್ತಾರೆ. ಈ ಮೇಲ್ಕಂಡ ಚಕ್ಕುಬಂದಿಯ ಒಳಗೆ ವಾದಿ ಮತ್ತು ಪ್ರತಿವಾದಿ 1 ರಿಂದ 5 ಸ್ವಾಧೀನದಲ್ಲಿ ಇದ್ದೀರಿ ಎಂದರೆ ಸರಿ.

3. ದಾವಾ ಅನುಸೂಚಿ ಮೂಲತಃ ನಿಮ್ಮ ತಂದೆಗೆ ಸೇರಿದ ಆಸ್ತಿ ಎಂದರೆ ಸಾಕ್ಷಿಯು ನನ್ನ ತಂದೆ ಕೊಂಡಿದ್ದ ಆಸ್ತಿ ಎಂದು ನುಡಿಯುತ್ತಾರೆ. ಭಾಗದಲ್ಲಿ ನಿಮ್ಮ ಹೆಸರಿಗೆ 6 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿ. ಆದೇ ಆಸ್ತಿಗೆ ವಾದಿಯು ಈ ದಾವಾ ಸಲ್ಲಿಸಿದ್ದಾರೆ ಎಂದರೆ ಸರಿ. ನೀವು ನಿವೃತ್ತ ಶಿಕ್ಷಕರು ಎಂದರೆ ಸರಿ. ನೀವು ನಿವೃತ್ತಿ ಹೊಂದಿ ಎಷ್ಟು ವರ್ಷ ಆಗಿರುತ್ತದೆ ಎಂದರೆ ಸಾಕ್ಷಿಯು 2022 ರಲ್ಲಿ ಎಂದು ನುಡಿಯುತ್ತಾರೆ. ನೀವು ಶಿಕ್ಷಕರಾಗಿದ್ದಾಗ ಸರ್ಕಾರದಿಂದ ಸಂಬಳ ಬರುತ್ತಿತ್ತು ಎಂದರೆ ಸರಿ. ನೀವು ನಿವೃತ್ತಿ ಹೊಂದಿದಾಗ ನಿಮಗೆ ಎಷ್ಟು ಸಂಬಳ ಬರುತ್ತಿತ್ತು ಎಂದರೆ ಸಾಕ್ಷಿಯು 38,000/- ಬರುತ್ತಿತ್ತು ಎಂದು ನುಡಿಯುತ್ತಾರೆ. ನಿಮಗೆ ಸಂಬಳ ಬರುತ್ತಿದ್ದರಿಂದ ನಿಮಗೆ ಸಾಲ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು 4 ಜನ ತಂಗಿಯರ ಮದುವೆ ಮಾಡಿದ್ದೇನೆ ಎಂದು ನುಡಿಯುತ್ತಾರೆ. ದಿಃ 21.05.2012 ರಲ್ಲಿ ದಾವಾ ಸ್ವತ್ತಿನ ಪೈಕಿ 3 ಎಕರೆಯನ್ನು 6 ನೇ ಪ್ರತಿವಾದಿ ಗೌರಮ್ಮ ರವರಿಗೆ ಕ್ರಯ ಪತ್ರ ಬರೆದುಕೊಟ್ಟಿದ್ದೀರಿ ಎಂದರೆ ಸ್ರ. ಆ ಕ್ರಯ ಪತ್ರಕ್ಕೆ ವಾದಿಯು ಸಹಿ ಮಾಡಿರಲಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ವಾದಿಯು ಗರ್ಭಿಣಿಯಾಗಿದ್ದರು ಅವರು ಬಸ್ಸಿನಲ್ಲಿ ಓಡಾಡಿದರೇ ಗರ್ಭಪಾತವಾಗುವ ಸಂಭವವಿರುತ್ತದೆ ಎಂದು ಹೇಳಿ ಬಂದಿರಲಿಲ್ಲ ಆದರೆ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ. ವಾದಿಯು ಯಾವುದೇ ಒಪ್ಪಿಗೆ ಪತ್ರವನ್ನು ಬರೆದುಕೊಡದೇ ಇದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದು ನೀಡಲಾಯಿತು**.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.